ಮೈಸೂರ ಗೆಜಿಟ್.

ಸಂ. 49.] ಸರ್ಕಾರದಿಂದ ಪಾಯಿಷ್ ಆದ್ದು. [ನಂ. 9.

ಬೆಂಗಳೂರು, ಗುರುವಾರ, ಫೆಬ್ರವರಿ ತಾ॥ 26, ಸನ್ 1914.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟಸಂಖ್ಯೆ.
Iನೆ ಭಾಗ—ಮೈಸೂರು ಸೀಮೆಯ ಶ್ರೀಮಂ ಮಹಾರಾಜಾ ಸರ್ಕಾರದ ಆಯಾಯ ಇಲಾಖಾದವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು	97—102
ಪಬ್ಲಿಕ್ ವರ್ಕ್ಸ್ ಇಸ್ತಿಹಾರ್ನಾಮೆ ನಂಬರ್ 32—C. P. S. ಮತ್ತು 213–1135	1— 25
IIನೆ ಭಾಗ—ಫಾರೆಸ್ಟ್ಟು, ಫೈನಾರ್ಷಿಯಲ್, ರೆವಿನ್ಯೂ, ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ, ಸರ್ಕಾರಿ ಪ್ರಕಟನೆಗಳು	153—163
IIIನೆ ಭಾಗ—ಲೆಜಿಸ್ಲೆಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು	26— 27
IVನೆ ಭಾಗ—ಸರ್ಕಾರಿ ಕಾಗದ ಪತ್ರಗಳು-1914ನೆ ವರ್ಷದ 7ನೆಯ ಶನಿವಾರಕ್ಕೆ ಮುಗಿದ ಬಂದು ವಾರದ ಸೀರ್ಸ ರಿಪೋರ್ಟು ಯಾ ಕಾಲಗತಿಯನ್ನು ತೋರಿಸುವ ವರದಿ	77— 84

I ನೆ ಭಾಗ.

ಮೈಸೂರು ಸೀಮೆಯ ಶ್ರೀಮಂ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 3ನೆಯ ಫೆಬ್ರವರಿ 1914.

ನಂ. ಜೆ. 2197—ಕೋ. 197–13–2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 172 ಮತ್ತು 188ನೆಯ ಪ್ರಕರಣಗಳ ಮೇರೆಗೆ, ಬೆಂಗಳೂರು ಡಿವಿಜನ್ನಿನ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜಿಯವರಾದ ಮಿ॥ ಆರ್. ಬಿ. ಪ್ಲವರ್ ಬ್ಯಾರಿಸ್ಟರ್ ಅಟ್ ಲಾ ಯವರಿಗೆ 1914ನೆಯ ಫೆಬ್ರುವರಿ 5ನೆಯ ತಾರೀಖಿನ ಲಾಗಾಯಿತು ಅಥವಾ ಆ ಮುಂದೆ ಅವರು ರಜವನ್ನು ಉಪಯೋಗಿಸಿಕೊಳ್ಳುವ ತಾರೀಖಿನ ಲಾಗಾಯಿತು ಏಳು ದಿವಸಗಳ ಪ್ರಿವಿಲಿಜ್ ರಜವನ್ನು ಕೊಡಲಾಗಿದೆ.

ತಾರೀಖು 6ನೆಯ ಫೆಬ್ರವರಿ 1914.

ನಂ. ಜೆ. 2215—ಪೊ. 120–13–6, 1914ನೆಯ ಜನವರಿ 17ನೆಯ ಮಾರ್ಕಂ ಜೆ. 2010—ಪೋ. 120–13–4ನೆಯ ನಂಬರಿನ ಇಸ್ತಿಹಾರ್ನಾಮೆಯ 1ನೆಯ ಪ್ಯಾರವನ್ನು ಬದಲಾಯಿಸಿ, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 172ನೆಯ ಪ್ರಕರಣದ ಮೇರೆಗೆ ಫ್ರೆಂಚ್‌ರಾಕ್ಸ್ ಸರ್ಕಾರಿನ ಪೊಲೀಸ್ ಸೂಪರ್‌ಇಂಟೆಂಡೆಂಟರಾದ ಮಿ॥ ಎ. ವೇದಾಂತದೇಶಿಕಂ ಅಯ್ಯಂಗಾರ್ಯರವರಿಗೆ ಅವರು ರಜವನ್ನು ಉಪಯೋಗಿಸುವ ತಾರೀಖಿನ ಲಾಗಾಯಿತು ಮೂರು ತಿಂಗಳ ಪ್ರಿವಿಲಿಜ್ ರಜವನ್ನು ಕೊಡಲಾಗಿದೆ.

2. ಮೇಲ್ಕಂಡ ರಜದ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಸದರ ಇಸ್ತಿಹಾರ್ನಾಮೆಯ 2ನೆಯ ಪ್ಯಾರದಲ್ಲಿ ಹುಕುಂ ಮಾಡಿರುವ ಬದಲಿ ಏರ್ಪಾಟೇ ನಡೆಯತಕ್ಕದ್ದು.

ತಾರೀಖು 17ನೆಯ ಫೆಬ್ರುವರಿ 1914.

ನಂ. ಜ. 2355—ಪೋ. 204–12–5, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನು ನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :— ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಮುನಿರಡ್ಡಿಪಾಳ್ಯದಲ್ಲಿ ಪೊಲೀಸ್ ಉಕ್ಕಡವನ್ನೂ ನೌಕರರಿಗೆ ಮನೆಗಳನ್ನೂ ಕಟ್ಟತಕ್ಕ ಬಗ್ಗೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಬೆಂಗಳೂರು ಡಿ॥ ಸಿವಿಲ್ ಆಫೀಸರು ಮತ್ತು ಡೆಪ್ಯುಟೆ ಕಮೀಷನರವರ ಪರ್ಸನಲ್ ಅಸಿಸ್ಟೆಂಟರಿಗೆ, ಡಿ॥ ಈ॥ ರವರ ಅಧಿಕಾರವನ್ನು ಚಲಾಯಿಸುವುದಕ್ಕೂ ಸದರಿ ಜಮೀನನ್ನು ಹೊಂದುವುದಕ್ಕೂ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ತಿಸ್ಟ್ರಿಕ್ಟು	ತಾಲ್ಲೂಕು	ಹೋಬ್ಳಿ	ಗ್ರಾಮ	ಖಾತೇದಾರರ ಯಾ ನೋಟೀಸಿಗೆ ಹೆಸರು ಅನುಭವದಾರ	ಸರ್ವೇ ನಂಬರು	ಖುಷ್ಕಿ, ತರಿ ಯಾ ಬಾಗಾಯ್ತು	ಒಟ್ಟು ವಿಸ್ತೀರ್ಣ	ಖರಾಬು	ಉಳಿದ ವಿಸ್ತೀರ್ಣ	ಕಂದಾಯ	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ	ಕಂದಾಯ	ಚತುರ್ಗಡಿ			
													ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ಬೆಂಗಳೂರು	ಬೆಂಗಳೂರು	ಬೆಂಗಳೂರು	ನುಲಪಹಳ್ಳಿ	ಮುನಿಸಾಮಿ ಉರುಫ್ ಮುನಿಜಪ್ಪನ ಮಗ ಅನುಭವದಾರ ನೋಟೀಸಿನಾಪ್ರಕಾರ	4	ಖುಷ್ಕಿ	ನ. ಗು. 6 27	ನ. ಗು. 0 22	ನ. ಗು. 6 5	ರೂ. ಅ. 10 0	ನ. ಗು. 0 7	ರೂ. ಅ. 0 5	ಸರ್ವೆ 4ನೆಯ ನಂಬರಿನ ಖಂಡು ಭೂಮಿಗೆ	ಸರ್ವೆ ನಂಬರು 3	ಸರ್ವೆ 4ನೆ ನಂಬರಿನ ಖಂಡು ಭೂಮಿಗೆ	ತುನುಕೂರು ಮತ್ತು ಬಂಡಿನ ರಸ್ತೆಗಳು

ತಾರೀಖು 18ನೆಯ ಫೆಬ್ರುವರಿ 1914.

ನಂ. ಜ. 2377—ಕೋರ್ಟ್ 203–13–2, 1904ನೆ ಇಸವಿಯ ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆಯ ಪ್ರಕರಣದ ಮೇರೆಗೆ, ಮಾಗಡಿ ತಾಲ್ಲೂಕು ಅಮಲ್ದಾರ್ ಮತ್ತು 3ನೆಯ ತರಗತಿ ಮ್ಯಾಜಿಸ್ಟ್ರೇಟರಾದ ವಿ॥ ಎ. ರಾಜಾರಾಯರನ್ನು 2ನೆ ತರಗತಿಯ ಮ್ಯಾಜಿಸ್ಟ್ರೇಟರನ್ನಾಗಿ ನೇಮಿಸಲಾಗಿದೆ.

ತಾರೀಖು 18ನೆಯ ಫೆಬ್ರುವರಿ 1914.

ನಂ. 2379—ಕೋ. 213–13–2, 1904ನೆಯ ಇಸವಿ ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆಯ ಪ್ರಕರಣವನ್ನು ಅನುಸರಿಸಿ, ಕಡೂರು ಸಬ್ ಡಿವೀರ್ಜ ಅಸಿಸ್ಟೆಂಟ್ ಕಮೀಷನರ್ ಮತ್ತು ಸೆಕೆಂಡ್ ಕ್ಲಾಸ್ ಮಾಜಿಸ್ಟ್ರೇಟ್ ವಿ॥ ಬಿ. ಟಿ. ಕೇಶವ ಅಯ್ಯಂಗಾರ್ ಬಿ.ಎ., ಯವರನ್ನು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರನ್ನಾಗಿ ನೇಮಿಸಿದೆ ಮತ್ತು ಅದೇ ಕೋಡಿನ 357ನೆಯ ಪ್ರಕರಣವನ್ನು ಅನುಸರಿಸಿ, ತಮ್ಮಿಂದ ವಿಚಾರಿಸಲ್ಪಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳು ಕೊಡುವ ಸಲಕ್ಷ್ಯಗಳನ್ನು ಇಂಗ್ಲಿಷ್ ಭಾಷೆಯಲ್ಲಿ ತಮ್ಮ ಸ್ವಂತ ಬರವಣಿಗೆಯಲ್ಲಿ ಬರೆದುಕೊಳ್ಳಲು ಅವರಿಗೆ ಅಧಿಕಾರ ಕೊಟ್ಟಿರುವುದಲ್ಲದೆ ಅದೇ ಕೋಡಿನ "37"ನೆಯ ಪ್ರಕರಣವನ್ನು ಅನುಸರಿಸಿ ಹೆಚ್ಚಾಗಿ ಈ ಕೆಳಗೆ ಕಂಡ ಅಧಿಕಾರಗಳನ್ನೂ ಅವರಿಗೆ ಕೊಡಲಾಗಿದೆ :—

1. ಆಯಾ ಸ್ಥಳಗಳ ಕಕ್ಷಿಗಳ ವಿಷಯದಲ್ಲಿ ಹುಕುಂ ಮಾಡುವುದು.—133ನೆಯ ಪ್ರಕರಣ.
2. ತಮಗೆ ಸಂಬಂಧಪಟ್ಟ ಯಜಮಾನ್ಯಾರಿಯ ಸ್ಥಳಕ್ಕಿಂತ ಹೊರಗಿನ ಪ್ರದೇಶದಲ್ಲಿ, ತಕ್ಸೀರನ್ನು ನಡಿಸಿ ತಮಗೆ ಸಂಬಂಧಪಟ್ಟ ಯಜಮಾನ್ಯಾರಿ ಪ್ರದೇಶದಲ್ಲಿರುವವರಿಗೆ ಪ್ರೊಸೆಸ್ಸನ್ನು ಕೊಡುವ ಅಧಿಕಾರ.—ಕ್ರಿ. ಪ್ರೊ. ಕೋ. 186ನೆಯ ಪ್ರಕರಣ.
3. ಪೊಲೀಸ್ ರಿಪೋರ್ಟುಗಳ ಮೇರೆಗೆ ಮೊಕದ್ದಮೆಗಳನ್ನು ಹೂಡಿಯತಕ್ಕ ಅಧಿಕಾರ.—ಕ್ರಿ. ಪ್ರೊ. ಕೋ. "190(b)"ನೆಯ ಪ್ರಕರಣ.
4. ಕಳವಾದ ಅಥವಾ ಕಳವು ವಗೈರೆ ಆಯಿತೆಂದು ಗುಮಾನೆ ಪಡುವುದಕ್ಕೆ ಆಸ್ಪದವಾದ ಸ್ವತ್ತನ್ನು ಹೆರಾಜು ಮಾಡಿಸುವ ಅಧಿಕಾರ.—ಕ್ರಿ. ಪ್ರೊ. ಕೋ. "524 ನೆಯ ಪ್ರಕರಣ".
5. ಬಿಡುಗಡೆಯಾದ ಖೈದಿಗಳಿಗೆ ವಾಸಸ್ಥಳವನ್ನು ತಿಳಿಸಬೇಕೆಂದು ಹುಕುಂ ಮಾಡುವ ಅಧಿಕಾರ.—ಕ್ರಿ. ಪ್ರೊ. ಕೋ. 565ನೆಯ ಪ್ರಕರಣ.

ತಾರೀಖು 19ನೆಯ ಫೆಬ್ರುವರಿ 1914.

ನಂ. ಜ. 6632—ಜ. ವಿ. 270–13–2, ಶ್ರೀಮನ್ ಮಹಾರಾಜಾ ಸರ್ಕಾರದವರು, ಜನರಲ್ ಮತ್ತು ರೆವಿನ್ಯೂ ಸೆಕ್ರಿಟೇರಿಯೆಟ್ ಸೂಪರ್‌ನ್ಟೆಂಡೆಂಟ್ ವಿ॥ ಬಿ. ವಿ. ಲಕ್ಷ್ಮಣರಾಯರಿಗೆ ಅಸಿಸ್ಟೆಂಟ್ ಕಮೀಷನರ ದರ್ಜೆಯನ್ನೂ ಸ್ಥಿತಿಯನ್ನೂ ದಯೆ ಪಾಲಿಸಿರುತ್ತಾರೆ.

ತಾರೀಖು 25ನೆ ಫೆಬ್ರವರಿ 1914.

ನಂ. ಜು. 2448—ಲೆಜಿಸ್. 36-13-2, 1903ನೆಯ ಇಸವಿಯ Iನೆಯ ನಂಬರು ಮೈಸೂರು ರಿಜಿಸ್ಟ್ರೇಷನ್ ರೆಗ್ಯುಲೇಷನಿನ 78ನೆಯ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಶ್ರೀಮನ್ ಮಹಾರಾಜರವರ ಸರ್ಕಾರದವರು, 1913ನೆಯ ಸೆಪ್ಟೆಂಬರು 2ನೆಯ ತಾರೀಖಿನ ಜ. 2146—ಜ. ವಿ. 55-12-240ನೆಯ ನಂಬರು ಸರ್ಕಾರಿ ಇಸ್ತಿಹಾರ್ನಾಮೆಯೊಡನೆ ಫಾಯಿಷ್ಮಾಡಲ್ಪಟ್ಟ ನಿಬಂಧನೆಗಳ ಮೇರೆಗೆ ಯಂತ್ರ ಮುಂತಾದವುಗಳ ಸರಬರಾಯಿಗೋಸ್ಕರ ತೆಗೆದುಕೊಂಡ ಸಾಲಗಳ ಮತ್ತು ನಡೆದ ಒಡಂಬಡಿಕೆಗಳ ಸಂದರ್ಭದಲ್ಲಿ ದರಖಾಸ್ತುದಾರರಿಂದ ಅಥವಾ ಜಾಮೀನುದಾರರಿಂದ ಬರೆದು ಕೊಡಲ್ಪಟ್ಟ ದಸ್ತಾವೇಜುಗಳ ಮೇಲೆ ಇದರಡಿ ಕಂಡ ರಿಜಿಸ್ಟ್ರೇಷನ್ ಫೀಜುಗಳ ಸ್ಪೆಷಲ್ ದರಗಳನ್ನು ವಿಧಿಸಿ ಇರುತ್ತಾರೆ. ಯಾವುವೆಂದರೆ :—

ಫೀಜುಗಳ ಸ್ಪೆಷಲ್ ದರಗಳು

		ರೂ.	ಆ.	ಪೈ.
1.	ಬೆಲೆಯು 100 ರೂಪಾಯಿಗೆ ಮೀರದಿದ್ದರೆ—ಷೆಡ್ಯೂಲು ನೇರಿ	0	8	0
2.	100 ರೂಪಾಯಿಗೆ ಮೀರಿ 1,000 ರೂಪಾಯಿಗೆ ಮೀರದಿದ್ದರೆ	1	0	0
	(a) 1,000 ರೂಪಾಯಿಗೆ ಮೀರಿ 5,000 ರೂಪಾಯಿಗೆ ಮೀರದಿದ್ದರೆ	2	0	0
	(b) ಇತರ ಎಲ್ಲಾ ಸಂದರ್ಭಗಳಲ್ಲಿ	4	0	0
3.	ಹುಡುಕುವ ಬಗ್ಗೆ	ಮುಫತ್ತು ಅಥವಾ ಫೀ ಇಲ್ಲದೆ.		
4.	ಸೈ ವೊಹರಾದ ನಕಲುಗಳಿಗೆ	100 ಮಾತುಗಳಿಗೆ ಒಂದಾಣೆಯಂತೆ.		

		ರೂ.	ಆ.	ಪೈ.
5.	ಪವರ್ ಆಫ್ ಅಟರ್ನಿ ಸೈ ಬಗ್ಗೆ	0	4	0
6.	ರಿಜಿಸ್ಟರಿಂಗ್ ಆಫೀಸರುಗಳು ಖಾಸಗಿ ಮನೆಗಳಿಗೆ ಹೋಗಿ ಹಾಜರಾಗುವ ಬಗ್ಗೆ	2	0	0
7.	ಕಮಿಷನ್ ಏಪರ್ಾಡಿಗೆ	2	0	0
8.	ರಿಜಿಸ್ಟರಿಂಗ್ ಆಫೀಸರವರಿಗೆ ಅಥವಾ ಇತರರಿಗೆ ಮೈಲೇಜು ಮೈಲಿ ಒಂದಕ್ಕೆ	0	2	0

ತಾರೀಖು 25ನೆಯ ಫೆಬ್ರವರಿ 1914.

ನಂ. ಜು. 2450—ಲೆಜಿಸ್. 36-13-3, ಸ್ಯ 1900ನೆಯ ಇಸವಿಯ IIನೆಯ ನಂಬರ್ ಮೈಸೂರು ಸ್ಟ್ಯಾಂಪ್ ರೆಗ್ಯುಲೇಷನಿನ, 9ನೆಯ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರವನ್ನು ಚಲಾಯಿಸುವುದರಲ್ಲಿ, ಶ್ರೀಮನ್ಮಹಾರಾಜಾ ಸರ್ಕಾರದವರು ಅಪ್ಪಣೆ ಮಾಡುವುದೇನಂದರೆ—ವ್ಯವಸಾಯ ಮತ್ತು ಕೈಗಾರಿಕೆ ಕೆಲಸಗಳಿಗೆ ಸೌಲಭ್ಯವನ್ನು ಕಲ್ಪಿಸತಕ್ಕ ಬಗ್ಗೆ 1913ನೆಯ ಸೆಪ್ಟೆಂಬರ್ 2ನೆಯ ಮುಕ್ರ್ಯಂ ಜ. 2146—ಜ. ವಿ. 55-12-240ನೆಯ ನಂಬರ್ ಸರ್ಕಾರೀ ಇಸ್ತಿಹಾರಿನ ಮೂಲಕ ಪ್ರಚುರಪಡಿಸಲ್ಪಟ್ಟ ನಿಬಂಧನೆಗಳ ಮೇರೆಗೆ, ಯಂತ್ರವನ್ನು ಸರಬರಾಯಿ ಮಾಡುವುದಕ್ಕಾಗಲೀ ಅಥವಾ ಇತರ ಉದ್ದೇಶಗಳಿಗಾಗಲೀ ತಾವು ಮಾಡಿಕೊಳ್ಳುವ ಕರಾರುಗಳಮೇಲೆ ಪಡೆದುಕೊಂಡ ಸಾಲಗಳ ವಿಷಯದಲ್ಲಿ ದರಖಾಸ್ತುದಾರರಾಗಲೀ ಅಥವಾ ಅವರ ಜಾಮೀನುದಾರರಾಗಲೀ ಬರೆದುಕೊಡುವ ಪತ್ರಗಳಿಗಾಗಿ ವಸೂಲ್ಮಾಡಬೇಕಾದ ಸ್ಟ್ಯಾಂಪ್ ಡ್ಯೂಟಿಯು 1900ನೆಯ ಇಸವಿ ಮೈಸೂರು ಸ್ಟ್ಯಾಂಪ್ ರೆಗ್ಯುಲೇಷನಿನ 1ನೆಯ ಷೆಡ್ಯೂಲಿನ 12 (b) ಆರ್ಟಿಕಲ್ ಮೇರೆಗೆ ಕೇಳಿದಕೂಡಲೆ ಅಲ್ಲದೆ ಬರೆದ ತಾರೀಖು ಲಾಗಾಯಿತು ಅಥವಾ ದರ್ಶನದ ತಾರೀಖು ಲಾಗಾಯಿತು ಒಂದು ಸಂವತ್ಸರಕ್ಕೆ ಅತಿಕ್ರಮಿಸದ ವಾಯಿದೆಯೊಳಗೆ ಪಾವತಿಯಾಗತಕ್ಕದ್ದಾಗಿ ಇರುವ ಬಿಲ್ಸ್ ಆಫ್ ಎಕ್ಸ್ಚೇಂಜ್ ಎಂಬ ಹುಂಡಿಗಳ ವಿಷಯದಲ್ಲಿ ವಸೂಲ್ಮಾಡತಕ್ಕಂಥ ಡ್ಯೂಟಿಯಂತೆಯೇ ಇರತಕ್ಕದ್ದು.

ತಾರೀಖು 25ನೆಯ ಫೆಬ್ರವರಿ 1914.

ನಂ. ಜು. 2455—ರೆಜಿ. 5-13-17, ಸ್ಯ 1913ನೆಯ ಡಿಸೆಂಬರ್ 1ನೆಯ ಮುಕ್ರ್ಯಂ ಜು. 2014—ರೆಜಿ. 5-13-10ನೆಯ ನಂಬರ್ ಇಸ್ತಿಹಾರ್ನಾಮೆಯನ್ನು ಬದಲಾಯಿಸಿ, ದೀರ್ಘಕಾಲದ ರಜದಮೇಲೆ ಇರುವ, ಎಸ್. ವೆಂಕಟರಂಗ ಅಯ್ಯಂಗಾರ್ಯರಿಗೆ ಬದಲಾಗಿ, ಸಬ್ ರಿಜಿಸ್ಟ್ರಾರ್ ಎಂ. ರಾಘವೇಂದ್ರರಾಯರನ್ನು ಚಿಂತಾಮಣಿಯಿಂದ ಕುಣಿಗಲಿಗೆ ವರ್ಗಾಯಿಸಿರುತ್ತದೆ.

ತಾರೀಖು 18ನೆಯ ಫೆಬ್ರವರಿ 1914.

ನಂ. 7937—ಮ್ಯು. 28-13-18, 1906ನೆಯ VIIನೆಯ ನಂಬರಿನ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 10, 11 ಮತ್ತು 17ನೆಯ ಪ್ರಕರಣಗಳ ಮೇರೆಗೂ ಮತ್ತು ಅದನ್ನನುಸರಿಸಿ ಏರ್ಪಟ್ಟ ನಿಬಂಧನೆಗಳ ಮೇರೆಗೂ ಇದರಡಿ ಕಂಡ ದೊಡ್ಡ ಮನುಷ್ಯರನ್ನೂ ಆಫಿಸರುಗಳನ್ನೂ 1914ನೆಯ ಮಾರ್ಚಿ 2ನೆಯ ತಾರೀಖಿನ ಲಾಗಾಯಿತು ಮೂರು ವರ್ಷಗಳ ವರೆಗೆ ಹರಿಹರದ ಟವನಿನ ಮ್ಯುನಿಸಿಪಲ್ ಕೌನ್ಸಿಲಿನ ಮ್ಯುನಿಸಿಪಲ್ ಕೌನ್ಸಿಲರನ್ನಾಗಿ ಚುನಾಯಿಸಲಾಗಿದೆ ಅಥವಾ ವೊಕರರ್ನ್ಯಾಡಲಾಗಿದೆ :—

I. ಚುನಾಯಿಸಲ್ಪಟ್ಟವರು 10 (1) (a) ಪ್ರಕರಣದ ಮೇರೆಗೆ.

1. ಮಿ॥ ಹಂಜೆಗಿ ಮೆಣಸಿ ಚನ್ನೆಬಸವಯ್ಯನವರು.
2. ,, ಗೌಡನಾಗಪ್ಪನವರು.
3. ,, ಜಿ. ಗುರುಸಿದ್ದಪ್ಪನವರು.
4. ,, ಪಡೆ ಅನಂತನಾಯಕರು.

II. ಮೊಕರರ್ರಾಡಲ್ಪಟ್ಟವರು A. 10 (1) (b) (i) ಪ್ರಕರಣದ ಮೇರೆಗೆ.

5. ಮಿ॥ ಶಂಕರನಾಯಕರು.
6. ,, ಲಬ್ಬಿ ಉಸ್ಮಾರ್ಕ್ ಸಾಬರು.
7. ,, ಬಲಗಿ ರಾಮಚಂದ್ರ ಕಿಲೆದಾರರು.
8. ,, ಕಿದ್ದಿಕೆರೆ ಪರಸಪ್ಪನವರು.

B. 10 (1) (b) (ii) ಪ್ರಕರಣದ ಮೇರೆಗೆ.

9. ದಾವಣಗೆರೆ ಸಬ್ ಡಿವಿಜನ್ನಿನ ಅಸಿಸ್ಟೆಂಟ್ ಕಮಿಷನರವರು, ಪ್ರೆಸಿಡೆಂಟ್.
10. ಹರಿಹರ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರವರು, ವೈಸ್ ಪ್ರೆಸಿಡೆಂಟ್.
11. ಹರಿಹರದ ಮೆಡಿಕಲ್ ಆಫಿಸರು.
12. ದಾವಣಗೆರೆಯ ಮುರಹಮ್ಮತ್ ಇಲಾಖಾ ಸಬ್ ಡಿವಿಜ್ ಆಫಿಸರು.

ತಾರೀಖು 19ನೆಯ ಫೆಬ್ರವರಿ 1914.

ನಂ. 7967—ಲೋ. ಬೋ. 182-13-3, ಸ್ ಸ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಮೂರನೆ ತರಗತಿ ಟ್ರಾವಲರ್ಸ್ ಬಂಗ್ಲೆ ಕಟ್ಟತಕ್ಕ ಬಗ್ಗೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮೈಸೂರು ಸಬ್ ಡಿವಿಜ್ ಚಾರ್ಜ್‌ನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರಿಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ	ಖಾತೆದಾರರ ಯಾ ಸರ್ವೇಯರ ಹೆಸರು	ಸರ್ವೆ ನಂಬರು	ಖಿಷ್ಕಿ, ತರಿ ಯಾ ಬಾಗಾಯಿತು	ಒಟ್ಟು ವಿಸ್ತೀರ್ಣ	ಖರಾಬು	ಉಳಿದ ವಿಸ್ತೀರ್ಣ	ಕೈದಾಯ	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ	ಕೈದಾಯ	ಚತುರ್ಗಡಿ			
													ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ಮೈಸೂರು	ಹೆಗ್ಗಡದೇವನಕೋಟೆ	ನರಗೂರು	ಕನಬೂರ ನರಗೂರು	ಬಲ್ಲೂರ ಕೂರಲಿಂಗನ ಮಗ ಮಾನಯ್ಯ	185	ಖುಷ್ಕಿ	ಎ. ಗು. 2 11	....	ಎ. ಗು. 2 11	...	ಎ. ಗು. 2 11	...	ಹುಣಸೂರು—ಬೇಗೂರು ರಸ್ತೆ	ನರಗೂರು ಕನಬೂರ ಗ್ರಾಮನಿವೇಷನ	ಗ್ರಾಮಠಾಣ ಮತ್ತು ರಸ್ತೆ	ಸ್ಯೂ 186ನೆ ನಂಬರ್ ನಾಗನಾಳ ಜಮೀನ್

ತಾರೀಖು 21ನೆಯ ಫೆಬ್ರವರಿ 1914.

ನಂ. 8019—ಲೋ. ಬೋ. 188-13-2, ಹಾಸನ ಡಿಸ್ಟ್ರಿಕ್ಟು ಆಲೂರು ಸಬ್ ತಾಲ್ಲೂಕು ಬೋರ್ಡಿನಲ್ಲಿ ಹಾಲಿ ಸರ್ಕಾರಿ ಉದ್ಯೋಗಸ್ಥರಲ್ಲದ ಮೆಂಬರುಗಳ ಮೆಂಬರುತನದ ಅವಧಿಯು ಪೂರೈಸಿರುವುದರಿಂದ ಅವರ ಸ್ಥಾನಗಳಲ್ಲಿ ಇದರಡಿ ಕಂಡ ದೊಡ್ಡ ಮನುಷ್ಯರುಗಳು ಮೆಂಬರುಗಳಾಗಿ ಚುನಾಯಿಸಲ್ಪಟ್ಟು ಇರುತ್ತಾರೆ ಅಥವಾ ನೇಮಿಸಲ್ಪಟ್ಟು ಇರುತ್ತಾರೆ.

	ಮೆಂಬರ ಹೆಸರು		ಕಸಬು		ವಾಸಸ್ಥಳ
	ಲೋಕಲ್ ಬೋರ್ಡ್ ನಿಬಂಧನೆಗಳ 7ನೆಯ ಪ್ಯಾರಾ ಮೇರಿಗೆ ಚುನಾಯಿಸಲ್ಪಟ್ಟವರು.				
1.	ಮಿ॥	ದಾಸೇಗೌಡರು ಉರಫ್ ಅಪ್ಪಂಣಗೌಡರು	ಜಮೀರ್ದಾರ್	....	ಆಲೂರು
2.	,,	ಕಾಳೇಗೌಡರು	ಪಟೇಲ್ ಮತ್ತು ಜಮೀರ್ದಾರ್	....	ಕಿರಗಡಲು
3.	,,	ಕೃಷ್ಣಪ್ಪನವರು	ಡಿಟೋ	....	ಸಿಂಗಾಪುರ
4.	,,	ಈರೇಗೌಡರು	ಡಿಟೋ	....	ನೆಲ್ಲಿಗೆರೆ
	ಲೋಕಲ್ ಬೋರ್ಡ್ ನಿಬಂಧನೆಗಳ 7ನೆಯ ಪ್ಯಾರದ (g) ಕ್ಲಾಜಿನ ಮೇರೆಗೆ ಚುನಾಯಿಸಲ್ಪಟ್ಟವರು.				
5.	,,	ಸುಬ್ಬೇಗೌಡರು	ಜಮೀರ್ದಾರ್	....	ಆಲೂರು
	ಲೋಕಲ್ ಬೋರ್ಡ್ ನಿಬಂಧನೆಗಳ (h) ಕ್ಲಾಜಿನ ಮೇರೆಗೆ ನೇಮಿಸಲ್ಪಟ್ಟವರು.				
6.	,,	ಕೃಷ್ಣಯ್ಯಂಗಾರ್ಯರು	ಜಮೀರ್ದಾರ್	....	ತೊರಗರವಳ್ಳಿ
7.	,,	ಜಮಾಲುದ್ದೀನ್ ಸಾಹೇಬರು	ಕಾಫೀಪ್ಲಾಂಟರ್	....	ಆಲೂರು
8.	,,	ನಂಜುಂಡಪ್ಪ ಸೆಟ್ಟಿಯವರು	ಅಕ್ಕಿಮಿಲ್ ಏಜಂಟ್	....	ಆಲೂರು
9.	,,	ನರಸಿಂಹಯ್ಯನವರು	ಶ್ಯಾನುಭೋಗ ಮತ್ತು ಜಮೀರ್ದಾರ್.	....	ಪಾಳ್ಯ
10.	,,	ಶ್ರೀಕಂಠಯ್ಯನವರು	ಕಾಯಂಗುತ್ತಾದಾರ್	....	ಹೊನತಾಪುರ
11.	,,	ಮುದ್ದಪ್ಪನವರು	ಜಮೀರ್ದಾರ್	....	ಭಕ್ತರವಳ್ಳಿ
12.	,,	ಶಂಕರರಾಯರು	ಡಿಟೋ	....	ವಾಸುದೇವನಹಳ್ಳಿ

ತಾರೀಖು 19ನೆಯ ಫೆಬ್ರವರಿ 1914.

ನಂ. 7972—ಮ್ಯು. 26–13–5, 1906ನೆಯ ಇಸವಿ VIIನೆಯ ನಂಬರ್ ಮ್ಯುನಿಸಿಪಲ್ ರೆಗ್ಯುಲೇಷನಿನ 10, 11 ಮತ್ತು 18ನೆಯ ಪ್ರಕರಣಗಳನ್ನೂ ಅದರಮೇರೆಗೆ ತಯಾರಾದ ನಿಬಂಧನೆಗಳನ್ನೂ ಅನುಸರಿಸಿ, ಶಿವಮೊಗ್ಗ ಟವನಿನ ಕೃಷ್ಣರಾಜಪುರ ಡಿವೀಜನ್ನಿಗೆ, ಮೃತರಾದ ಮಿ॥ ಅಬ್ದುಲ್‌ಕರೀಂ ಸಾಹೇಬರ ಸ್ಥಾನದಲ್ಲಿ ಪ್ಲೀಡರ್ ಮಿ॥ ಎ. ಜೆಲುವಯ್ಯಂಗಾರ್ಯರನ್ನು ಮ್ಯುನಿಸಿಪಲ್ ಕೌನ್ಸಿಲರನ್ನಾಗಿ ಚುನಾಯಿಸಲಾಗಿದೆ.

ತಾರೀಖು 21ನೆಯ ಫೆಬ್ರವರಿ 1914.

ನಂ. 8017—ಲೋ. ಬೋ. 161–13–4, ಬೆಂಗಳೂರು ಡಿಸ್ಟ್ರಿಕ್ಟ್ ಹೊಸಕೋಟೆ ತಾಲ್ಲೂಕು ಬೋರ್ಡಿಗೆ ಮೃತರಾದ ಮಿ॥ ಭಾಸ್ಕರಯ್ಯನವರಿಗೆ ಬದಲಾಗಿ ಮಿ॥ ಅನಂತರಾಮಯ್ಯನವರು ಒಬ್ಬ ಮೆಂಬರಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ತಾರೀಖು 14ನೆಯ ಫೆಬ್ರವರಿ 1914.

ನಂ. ರೆ. 6326—ಲ್ಯಾ. ರೆ. 52–13–8, ಅಮಲ್ದಾರ್ ಮಿ॥ ಎಚ್. ವೆಂಕಟನರಸಯ್ಯನವರನ್ನು ಮಿ॥ ಎಚ್. ಬಸವರಾಜ ಅರಸಿನವರು ರಜದ ಮೇಲೆ ಇರುವಾಗ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಮಳವಳ್ಳಿ ತಾಲ್ಲೂಕಿನ ಅಮಲ್ದಾರರನ್ನಾಗಿ ನೇಮಿಸಲಾಗಿದೆ.

ತಾರೀಖು 16ನೆಯ ಫೆಬ್ರವರಿ 1914.

ನಂ. ಫೈ. 3747—ಜ. ಫೈ. 54–13–8, ಕಂಟ್ರೋಲರ್ ಆಫೀಸಿನ ಈ ಕೆಳಿಗೆ ಕಂಡ ಗೆಜೆಟೆಡ್ ಆಫಿಸರುಗಳ ಮೊಕರರಾತಿಯನ್ನು ಮಂಜೂರ್ನಾಡಲಾಗಿದೆ :—

1. ಮಿ॥ ಎಸ್. ಕೃಷ್ಣಸ್ವಾಮಿರಾವ್, ಬಿ.ಎ., ಬಿ.ಎಲ್. ರವರು ಚೀಫ್ ಸೂಪರಿಂಟೆಂಡೆಂಟರಾಗಿರತಕ್ಕದ್ದು ; ಆದರೆ ಮತ್ತೊಂದು ಹುಕುಂ ಕೊಡುವ ವರೆಗೂ ಅಸಿಸ್ಟೆಂಟ್ ಕಂಟ್ರೋಲರಾಗಿ ಬದಲಿ ಕೆಲಸ ನೋಡತಕ್ಕದ್ದು.

2. ಕಂಟ್ರೋಲರ್ ಆಫೀಸಿನಲ್ಲಿ ಕೆಲಸ ನೋಡುತ್ತಲಿರುವ ಮಿ॥ ಕೆ. ಆರ್. ಕೃಷ್ಣಸ್ವಾಮಿ ಅಯ್ಯಂಗಾರ್, ಎಮ್.ಎ., ಬಿ.ಎಲ್. ರವರು ಹಂಗಾಮಿ ತರೀಖು ಚೀಫ್ ಸೂಪರಿಂಟೆಂಡೆಂಟರಾಗಿರತಕ್ಕದ್ದು.

ತಾರೀಖು 16ನೆಯ ಫೆಬ್ರವರಿ 1914.

ನಂ. ರೆ. 6433—ಫಾ. 129–13–4, ಮೈಸೂರು ಸರ್ವಿಸ್ ರೆಗ್ಯುಲೇಷನಿನ 172ನೆಯ ಪ್ರಕರಣದ ಮೇರೆಗೆ, ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮಿ॥ ಪಿ. ಎಸ್. ಗೋವಿಂದರಾಯರಿಗೆ 1914ನೆಯ ಜನವರಿ 19ನೆಯ ತಾರೀಖು ಲಾಗಾಯಿತು 12 ದಿನಗಳ ಪ್ರಿವಿಲೆಜ್ ರಜವನ್ನು ಕೊಡಲಾಗಿತ್ತು.

ತಾರೀಖು 17ನೆಯ ಫೆಬ್ರವರಿ 1914.

ನಂ. ಫೈ. 3758—ಸೆ. ರೆ. 130–13–4, ಮೈಸೂರು ಸಂಸ್ಥಾನದ ಎಕ್ಸೈಜ್ ಕಮಿಷನರ್ ಆಫೀಸಿನ ಚಾರ್ಜನ್ನೂ ರೆಜಿಸ್ಟ್ರೇಷನ್ ಇಲಾಖೆ ಇನ್‌ಸ್ಪೆಕ್ಟರ್ ಜನರಲ್‌ರವರ ಚಾರ್ಜನ್ನೂ, ಜಾಯಿಂಟ್ ಸ್ಟಾಕ್ ಕಂಪೆನಿಗಳ ಉದ್ಯೋಗಪ್ರಯುಕ್ತವಾದ ರೆಜಿಸ್ಟ್ರಾರರವರ ಚಾರ್ಜನ್ನೂ ಮತ್ತು 'ಸ್ಟಾಂಪ್' ಕಮಿಷನರ ಚಾರ್ಜನ್ನೂ ಸಹ 1914ನೆಯ ಫೆಬ್ರುವರಿ 13ನೆಯ ತಾರೀಖಿನ ಪೂರ್ವಾಹ್ನದಲ್ಲಿ ಮಿ॥ ಎಮ್. ಕಾಂತರಾಜ ಅರಸಿನವರು ಕೊಟ್ಟರು, ಮಿ॥ ಪಿ. ರಾಘವೇಂದ್ರರಾಯರವರು ವಹಿಸಿದರು.

ತಾರೀಖು 20ನೆಯ ಫೆಬ್ರವರಿ 1914.

ನಂ. ರೆ. 6582—ಲ್ಯಾ. ರೆ. 22–13–6, ಸ್ ಸ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ 'ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ, ಎಂದರೆ, ಗಾಮುಡಾಣಿ ಬಡಾವಣೆ ಬಗ್ಗೆ ಅವಶ್ಯಕವಾಗಿದೆ ; ಮತ್ತು ವೇಲ್ಲಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಶಿವಮೊಗ್ಗ ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮ ಜರುಗಿಸಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟ್	ತಾಲ್ಲೂಕು	ಹೋಬಳಿ	ಗ್ರಾಮದ	ಖಾತೇದಾರರ ಹೆಸರು ಅಥವಾ ಸಾಮಾನ್ಯ ಹೆಸರು	ಸರ್ವೆ ನಂಬರು	ಮುಳ್ಳು, ಹುಲ್ಲು ಯಾ ಜಾಗಾಯಿತು	ಒಟ್ಟು ವಿಸ್ತೀರ್ಣ	ಖರಾಬು	ಉಳಿದ ವಿಸ್ತೀರ್ಣ	ಕಂದಾಯ	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ	ಕಂದಾಯ	ಚತುರ್ಗಡಿ			
													ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ಶಿವಮೊಗ್ಗ	ಶಿಕಾರಿಪುರ	ಶಿಕಾರಿಪುರ	ಚಿಕ್ಕಜೋಗಿಹಳ್ಳಿ	ಅದಂಸಾಬ್ ನಬ್ಬ ಬುಡ್ಡಸಾಬ್	3	ಮುಳ್ಳು, ಹುಲ್ಲು	ಗು. ಗಂ. 9 14	ಗು. ಗಂ. 0 16	ಗು. ಗಂ. 8 28	ರೂ. ಅ. ಪೈ. 4 8	ಗು. ಗಂ. 2 32	....	ಇದೇ ಸರ್ವೆ ನಂಬರು ೩	ಇದೇ ಸರ್ವೆ ನಂಬರು ೩	ಇದೇ ಸರ್ವೆ ನಂಬರು ೩	ಗಾಮಡಾಣಿ

ತಾರೀಖು 21ನೆಯ ಫೆಬ್ರವರಿ 1914.

ನಂ. ರೆ. 6589—ಲ್ಯಾ. ಸರ್ವೆ. 32–13–2, ಮೈಸೂರು ಲಾಂಡ್ ರೆವಿನ್ಯು ಕೋಡಿನ (1888ನೆ ಇಸವಿ IVನೆಯ ನಂಬರು ರೆಗ್ಯುಲೇಷನಿನ) 236ನೆಯ ಪ್ರಕರಣದ ಮೇರೆಗೆ, ಮೈಸೂರು ಶ್ರೀಮನ್ಮಹಾರಾಜಾ ಸಾಹೇಬ್ಬಹಾದುರವರ ಸರ್ಕಾರದವರು, ಸದರಿ ಕೋಡಿನ 8, 9, 10ನೆಯ ಅಧ್ಯಾಯಗಳ ನಿಯಮಗಳನ್ನು ಬೆಂಗಳೂರು ತಾಲ್ಲೂಕು ಜೋಡಿ ಸಿಂಗಾಪುರ ಗ್ರಾಮಕ್ಕೆ ಜಾರಿಗೆ ತರಬೇಕೆಂದು ಅಪ್ಪಣೆ ಮಾಡಿರುತ್ತಾರೆ.

ಹುಕುಂ ಬಮೋಜೀಬ್,
ಕೆ. ಆರ್. ಶ್ರೀನಿವಾಸಯ್ಯಂಗಾರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.